ಜೆಎಸ್‌ಎಸ್ ಮಹಾವಿದ್ಯಾಪೀಠ

## ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ

ಮಹಾತ್ಮ ಗಾಂಧಿ ರಸ್ತೆ, ಮೈಸೂರು – 570004

# ಕಾಕ್ಲಿಯರ್ ಇಂಪ್ಲಾಂಟ್ ಹೇಗೆ ಬಳಸಬೇಕು




## "ಉತ್ತಮ ಶ್ರವಣ, ಉತ್ತಮ ಜೀವನ."

**ಸಂಪರ್ಕಿಸಿ**

ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ,
ಎಂ.ಜಿ. ರಸ್ತೆ, ಮೈಸೂರು – 570004

@ jssish@jssonline.org
jssishmys@rediffmail.com

0821-2548229, 0821-2335014



# ಕಾಕ್ಲಿಯರ್ ಇಂಪ್ಲಾಂಟ್ ಹೇಗೆ ಬಳಸಬೇಕು

- ಆನ್/ಆಫ್: ಪ್ರೊಸೆಸರ್ ಅನ್ನು ಆನ್/ಆಫ್ ಮಾಡಲು, ಕೆಳಗಿನ ಬಟನ್ ಅನ್ನು ಒತ್ತಿ ಹಿಡಿಯಬೇಕು.

- ಕಾಕ್ಲಿಯರ್ ಇಂಪ್ಲಾಂಟ್ ಅನ್ನು ಧರಿಸಲು ಪ್ರೊಸೆಸರ್ ಅನ್ನು ಕಿವಿಯ ಮೇಲೆ ಇರಿಸಿ ಮತ್ತು ಕಾಯಿಲ್ ಅನ್ನು ತಲೆಯ ಮೇಲಿರುವ ಇಂಪ್ಲಾಂಟಿನ ಮೇಲೆ ಇರಿಸಿ.

- ಪ್ರೋಗ್ರಾಮ್ ಬದಲಾಯಿಸಲು ಮೇಲಿನ ಬಟನ್ ಒತ್ತಿ ಮಿನುಗುವ ಲೈಟ್ ಅನ್ನು ನೋಡಿ. ಉದಾಹರಣೆಗೆ ಎರಡು ಸಲ ಲೈಟ್ ಮಿನುಗಿದರೆ ಎರಡನೇ ಪ್ರೋಗ್ರಾಮ್ ನಲ್ಲಿ ಇರುವುದು.

- ವಾಲ್ಯೂಮ್ ಜಾಸ್ತಿ ಮಾಡಲು ಮೇಲಿನ ಬಟನ್ ಒತ್ತಿ, ಕೆಳಗಿನ ಬಟನ್ ಕಡಿಮೆ ಮಾಡಲು ಒತ್ತಿ.

- ಇಯರ್ ಹುಕ್ ಸಡಿಲವಾಗಿದ್ದರೆ ಅದನ್ನು ಹೊಸದರೊಂದಿಗೆ ಬದಲಾಯಿಸಿ .




- ಆಯಸ್ಕಾಂತದ (ಮ್ಯಾಗ್ನೆಟ್ ) ಬಲವು ದುರ್ಬಲವಾಗಿದ್ದರೆ, ಕಾಯಿಲ್ ಬೀಳಬಹುದು. ಅದು ತುಂಬಾ ಬಲವಾಗಿದ್ದರೆ, ತಲೆಯ ಚರ್ಮವು ಕೆಂಪಾಗಿ ಗಾಯವಾಗಬಹುದು. ಆಯಸ್ಕಾಂತದ (ಮ್ಯಾಗ್ನೆಟ್) ಬಲದ ಬಗ್ಗೆ ನಿಮಗೆ ಖಚಿತವಿಲ್ಲದಿದ್ದರೆ ನಿಮ್ಮ ಶ್ರವಣ ತಜ್ಞರನ್ನು ಸಂಪರ್ಕಿಸಿ. ಆರಾಮದಾಯಕವಾದ ಮತ್ತು ಸುರಕ್ಷಿತವಾದ ಆಯಸ್ಕಾಂತವನ್ನು (ಮ್ಯಾಗ್ನೆಟ್ ) ಬಳಸಿ.

- ಆಯಸ್ಕಾಂತವನ್ನು ಬದಲಾಯಿಸಬೇಕಾದರೆ, ಆಯಸ್ಕಾಂತವನ್ನು ವೃತ್ತಾಕಾರದಲ್ಲಿ ಸುತ್ತ ನಿಮ್ಮಕಡೆ ತಿರುಗಿಸುವ ಮೂಲಕ ತೆಗೆದುಹಾಕಿ. ಹೊಸ ಆಯಸ್ಕಾಂತವನ್ನು ಕಾಯಿಲ್ ನ ಮೇಲ್ಭಾಗದ ರಂಧ್ರಕ್ಕೆ ಸೇರಿಸಿ. ಹಿಡಿತಗಳನ್ನು ಹೊಂದಿರುವ ಬದಿಯು ಮೇಲ್ಮುಖವಾಗಿರಬೇಕು. ಆಯಸ್ಕಾಂತವನ್ನು ನಿಮ್ಮಿಂದ ಹೊರ ದಿಕ್ಕಿನಲ್ಲಿ ವೃತ್ತಾಕಾರದಲ್ಲಿ ತಿರುಗಿಸುತ್ತಾ ಕಾಯಿಲ್ ಗೆ ಕೂರಿಸಿ.

- ಕಾಯಿಲ್ ಕೇಬಲ್ ತುಂಬಾ ಉದ್ದವಾಗಿದ್ದರೆ, ತುಂಬಾ ಚಿಕ್ಕದಿದ್ದರೆ ಅಥವಾ ಮುರಿದಿದ್ದರೆ, ಅದನ್ನು ಹೊಸ ಕಾಯಿಲ್ ಕೇಬಲ್‌ನೊಂದಿಗೆ ಬದಲಾಯಿಸಿ. ಕಾಯಿಲ್ ಕೇಬಲ್ ಬದಲಿಸುವಾಗ ಕಾಯಿಲ್ ನ ಸಾಕೆಟ್ ನಿಂದ ಜೋಪಾನವಾಗಿ ಹಳೆಯ ಕೇಬಲ್ ಅನ್ನು ನೇರವಾಗಿ ತೆಗೆಯಿರಿ, ತಿರುಗಿಸುವ ಅವಶ್ಯಕತೆ ಇಲ್ಲ. ನಂತರ ಹೊಸ ಕೇಬಲ್ ಅನ್ನು ಜೋಪಾನವಾಗಿ ಕಾಯಿಲ್ ಸಾಕೆಟ್ ಗೆ ಮತ್ತು ಪ್ರೊಸೆಸರ್ ನ ಸಾಕೆಟ್ ಗೆ ಹಾಕಿ.

**ಬ್ಯಾಟರಿ ಚಾರ್ಜ್ ಮಾಡುವ ವಿಧಾನ** - ಬ್ಯಾಟರಿ ಚಾರ್ಜ್ ಮಾಡುವ ಸಾಧನವನ್ನು ಅದರ ಅಡಪ್ಟರ್ನೊಂದಿಗೆ ( ಅಡಪ್ಟರ್ ) ವಿದ್ಯುತ್ ಪಾಯಿಂಟ್ಗೆ ಕನೆಕ್ಟ್ ಮಾಡಿ , ರಿಚಾರ್ಜಬಲ್ ಬ್ಯಾಟರಿಯನ್ನು ಚಿತ್ರದಲ್ಲಿ ತೋರಿಸಿರುವ ಹಾಗೆ ಒಂದು ಕೋನದಲ್ಲಿ(ಆಂಗಲ್) ಹಿಡಿದು ತಿರುಗಿಸಿ ಚಾರ್ಜರ್ ಗೆ ಕನೆಕ್ಟ್ ಮಾಡಿ , ಸ್ವಿಚ್ ಆನ್ ಮಾಡಿ . ಕೇಸರಿ ಲೈಟ್ ಮಿನುಗುತ್ತಿರುತ್ತದೆ ಅದು ಹಸಿರು ಲೈಟ್ ಆಗುವವರೆಗೂ ಚಾರ್ಜ್ ಮಾಡಿ.



## ಪರಿಕರಗಳ (ಆಕ್ಸೆಸರೀಸ್) ಬಳಕೆ:




**ಸೇಫ್ಟಿ ಲೈನರ್:** ಮಕ್ಕಳಿಗಾಗಿ ಪ್ರೊಸೆಸರ್‌ಗೆ ಸುರಕ್ಷತಾ ಸೇಫ್ಟಿ ಲೈನರ್ ಅನ್ನು ಜೋಡಿಸಬೇಕು, ಸೇಫ್ಟಿ ಲೈನರ್ ಒಂದು ತುದಿಯನ್ನು ಪ್ರೊಸೆಸರ್‌ಗೆ ಹಾಕಬೇಕು ಮತ್ತು ಇನ್ನೊಂದು ತುದಿಯನ್ನು ಮಗುವಿನ ಬಟ್ಟೆಗೆ ಕ್ಲಿಪ್ ಮಾಡಬೇಕು.




**ಹಗ್ಗೀಸ್:** ಮಕ್ಕಳಿಗಾಗಿ ಹಗ್ಗೀಸ್ ಅನ್ನು ಪ್ರೊಸೆಸರ್‌ಗೆ ಹಾಕಲಾಗುತ್ತದೆ.ಪ್ರೊಸೆಸರ್ಗೆ ಹಗೀಸ್ ಹಾಕುವುದರಿಂದ ಪ್ರೊಸೆಸರ್ ಕಿವಿಯಿಂದ ಕೆಳಗೆ ಬೀಳುವುದಿಲ್ಲ.




**ಬೇಬಿ ಲೈಟ್‌ವೇರ್:** ಕಿವಿಯ ಮೇಲಿನ ಪ್ರೊಸೆಸರ್‌ನ ತೂಕವನ್ನು ಕಡಿಮೆ ಮಾಡಲು, ಮಗು ತುಂಬಾ ಚಿಕ್ಕದಾಗಿದ್ದರೆ ಬೇಬಿ ಲೈಟ್ ವೇರ್ ಅನ್ನು ಬಳಸಬಹುದು.

**ಹೆಡ್‌ಬ್ಯಾಂಡ್‌ಗಳು:** ಕಾಕ್ಲಿಯರ್ ಇಂಪ್ಲಾಂಟ್‌ಗಳನ್ನು ಬಳಸುವ ಮಕ್ಕಳಿಗೆ, ವಿಶೇಷವಾಗಿ ಕಿರಿಯ ಮಕ್ಕಳಿಗೆ ಹೆಡ್‌ಬ್ಯಾಂಡ್‌ಗಳು ಸಹಾಯಕವಾಗಬಹುದು. ಆಟ ಅಥವಾ ಇತರ ಚಟುವಟಿಕೆಗಳ ಸಮಯದಲ್ಲಿ ಪ್ರೊಸೆಸರ್ ಬೀಳುವ ಅಪಾಯವನ್ನು ಹೆಡ್‌ಬ್ಯಾಂಡ್‌ಗಳು ಕಡಿಮೆ ಮಾಡುತ್ತದೆ.ಇದು ಮಗುವಿಗೆ ದಿನವಿಡೀ ಧರಿಸಲು ಹೆಚ್ಚು ಆರಾಮದಾಯಕವಾಗಿಸುತ್ತದೆ.

